

# ಬೇಸಿಗೆಯ ಟ್ರೆಂಡಿ ಉಡುಪು

ಕಾಲಕ್ಕೆ ತಕ್ಕಂತೆ ಉಡುಪು ಧರಿಸುವುದರಲ್ಲೂ ಭಿನ್ನತೆ ಇದೆ. ಬೇಸಿಗೆಗೆ ಹತ್ತಿ ಉಡುಪು ಬೇಕು. ಬಿಗಿಯಾದ ಉಡುಗೆಗಿಂತ ಹೆಚ್ಚು ಗಾಳಿಯಾಡುವ ಉಡುಪು ಧರಿಸಿದರೆ ದೇಹಕ್ಕೂ ಹಿತ, ಆರಾಮದಾಯಕ. ಹಾಗಾದರೆ ಬೇಸಿಗೆಯ ಟ್ರೆಂಡಿ ಉಡುಗೆ ಯಾವುದು?

■ ಯು. ವೇಣೂರು

ಬೇಸಿಗೆಯ ಉಡುಪು ಫ್ಯಾಷನಬಲ್ ಆಗಿರಬೇಕು, ಟ್ರೆಂಡಿಯೂ ಇದ್ದು ದೇಹಕ್ಕೆ ಹಿತವೂ ಆಗಿರಬೇಕು. ಏಕೆಂದರೆ ಬಿರು ಬಿಸಿಲಿನಲ್ಲಿ ಹತ್ತಿ ಬಟ್ಟೆಯೇ ಸೂಕ್ತ. ಬೆವರಿನ ಕಿರಿಕಿರಿ, ಬಿಸಿಲ ತಾಪ, ಒಣ ಹವೆ, ತೇವಾಂಶದ ಕೊರತೆ, ನೇರವಾಗಿ ಮೈಮೇಲೆ ಬೀಳುವ ಬಿಸಿಲಿನ ಝಳ ಇವೆಲ್ಲವನ್ನೂ ತಪ್ಪಿಸಲು ನಾವು ತೊಡುವ ಉಡುಪು ದೇಹಕ್ಕೆ ಒಗ್ಗುವಂತಿರಬೇಕು. ಹಾಗೆಯೇ ನೋಟಕ್ಕೂ ಒಪ್ಪುವಂತಿರಬೇಕು. ಹಾಗಿದ್ದರೆ ಬೇಸಿಗೆ ಫ್ಯಾಷನ್ ಯಾವುದು?

ಬೇಸಿಗೆ ಕಾಲದಲ್ಲಿ ನೈಲಾನ್, ಪಾಲಿಯಸ್ಟರ್, ವೆಲ್ವೆಟ್, ಸಿಲ್ಕ್, ಲೆದರ್, ಲೇಸ್ ಇರುವಂತಹ ಉಡುಪುಗಳನ್ನು ಬದಿಗಿರಿಸಿ ತಾಜಾ ಹತ್ತಿಯ ಉಡುಪು, ಖಾದಿ ಬಟ್ಟೆ, ಡೆನಿಮ್ ಡ್ರೆಸ್ ತೊಡುವುದು ಒಳ್ಳೆಯ ಉಪಾಯ.

ಬೇಸಿಗೆಯಲ್ಲಿ ಫ್ಯಾಷನ್‌ಪ್ರಿಯರಿಗೆ ಉಡುಗೆಯ ಆಯ್ಕೆ ಕಡಿಮೆ ಇದ್ದರೂ ಹತ್ತಿ, ಖಾದಿ, ಡೆನಿಮ್ ಬಟ್ಟೆಗಳಲ್ಲೇ ಹಲವು ವೈವಿಧ್ಯದ ಸೀರೆ, ಸಲ್ವಾರ್, ಕುರ್ತಿ, ಟಾಪ್, ಪಲಾಜೊ ಲಭ್ಯವಿದೆ. ಈ ಬಟ್ಟೆಗಳಲ್ಲಿ ಹೂವಿನ ಚಿತ್ತಾರದ (**Floral designs**) ಉಡುಗೆ ಯುವತಿಯರ ಮೆಚ್ಚುಗೆ ಗಳಿಸುತ್ತಿದೆ. ಫ್ಲೋರಲ್ ಬ್ರೀಜಿ ಡ್ರೆಸ್ ಇದೀಗ ಫ್ಯಾಷನ್ ಟ್ರೆಂಡ್ ಕೂಡ ಹೌದು.

‘ಹೂವಿನ ಚಿತ್ತಾರದ ಸ್ಕರ್ಟ್, ಮ್ಯಾಕ್ಸಿ, ಉದ್ದನೆಯ ಟಾಪ್